# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **766** |
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 18-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಗ್ರಾಮೀಣ ಭಾಗದ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಸಲು ಸುಮಾರು 40 ರಿಂದ 50 ವರ್ಷ ಹಳೆಯದಾದ ವಿದ್ಯುತ್ ತಂತಿಗಳು ಮೇಲಿಂದ ಮೇಲೆ ಅವು ಹರಿದು ಬೀಳುವುದರಿಂದ ರೈತರ ಬೆಳೆ ನಾಶ, ಮಾನವ ಹಾಗೂ ಪ್ರಾಣಿಗಳ ಜೀವಹಾನಿ ಪ್ರಕರಣಗಳು ಬಹಳಷ್ಟು ಕಂಡು ಬರುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹಳೆಯ ಈ ವಿದ್ಯುತ್‌ಗಳನ್ನು ಬದಲಾಯಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಹಳೆಯದಾದ ವಿದ್ಯುತ್ ವಾಹಕಗಳನ್ನು ಆದ್ಯತೆ ಮೇರೆಗೆ ಬದಲಾಯಿಸಲಾಗುತ್ತಿದೆ.<br><br>ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ, ಆರ್ಥಿಕ ವರ್ಷ 2024-25 ಮತ್ತು 2025-26ನೇ ಸಾಲಿನ (ಜುಲೈ 25ರ ಅಂತ್ಯಕ್ಕೆ) ಬದಲಾಯಿಸಲಾದ ಹೆಚ್.ಟಿ ಮತ್ತು ಎಲ್.ಟಿ ತಂತಿಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ರೈತರು ತಮ್ಮ ಜಮೀನಿನಲ್ಲಿ ತೋಟದ ಮನೆಗಳನ್ನು ನಿರ್ಮಿಸಿಗೊಂಡಿದ್ದು, ಅಂತಹ ತೋಟದ ಮನೆಗಳಿಗೆ ನಿರಂತರ ವಿದ್ಯುತ್ ಜ್ಯೋತಿ ಯೋಜನೆ ಜಾರಿಯಾಗದ ಕಾರಣ, ವಿದ್ಯುತ್ ಸಂಪರ್ಕ ಇಲ್ಲದೇ ಅವರು ಕತ್ತಲೆಯಲ್ಲಿ ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರಿಗೆ ವಿದ್ಯುತ್ ಸಂಪರ್ಕ ನೀಡುವ ದಿಶೆಯಲ್ಲಿ ಸರ್ಕಾರ ಹಾಕಿಕೊಂಡಿರುವ ಕ್ರಮಗಳೇನು? | ನಿರಂತರ ಜ್ಯೋತಿ ಯೋಜನೆಯು ಪ್ರತ್ಯೇಕ 11 ಕೆವಿ ವಿದ್ಯುತ್ ಮಾರ್ಗಗಳನ್ನು ನಿರ್ಮಿಸಿ ಗ್ರಾಮೀಣ ಪ್ರದೇಶದಲ್ಲಿರುವ ಕೃಷಿ ಮತ್ತು ಕೃಷಿಯೇತರ ವಿದ್ಯುತ್ ಹೊರೆ ಬೇರ್ಪಡಿಸುವ ಯೋಜನೆಯಾಗಿರುತ್ತದೆ.<br><br>ತೋಟದ ಮನೆ ಇರುವ ನೀರಾವರಿ ಪಂಪ್‌ಸೆಟ್ ಫೀಡರ್ ಗಳಿಗೆ ತೋಟದಲ್ಲಿ ವಾಸ ಮಾಡುತ್ತಿರುವ ಜನಗಳ ಅನುಕೂಲಕ್ಕಾಗಿ ಹಾಗೂ ಮಕ್ಕಳ ವಿದ್ಯಭ್ಯಾಸಕ್ಕಾಗಿ 7 ತಾಸು 3 ಫೇಸ್ ವಿದ್ಯುತ್ ಜೊತೆಗೆ ಸಂಜೆ 6 ರಿಂದ ಬೆಳಿಗ್ಗೆ 6 ಗಂಟೆಯವರೆಗೆ (3 ಫೇಸ್ ವಿದ್ಯುತ್ ಪೂರೈಕೆ ಇಲ್ಲದ ಅವಧಿಯಲ್ಲಿ) ಗೃಹಬಳಕೆ ವಿದ್ಯುತ್ ಭಾರಕ್ಕೆ ಸೀಮಿತವಾಗುವಂತೆ 1 ಫೇಸ್ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. |

ಸಂಖ್ಯೆ: ಎನರ್ಜಿ 193 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು 17/8/25

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:766ಕ್ಕೆ ಅನುಬಂಧ:**

**ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ, ಆರ್ಥಿಕ ವರ್ಷ 2024-25 ಮತ್ತು 2025-26ನೇ ಸಾಲಿನ (ಜುಲೈ 25ರ ಅಂತ್ಯಕ್ಕೆ) ಬದಲಾಯಿಸಲಾದ ಹೆಚ್.ಟಿ ಮತ್ತು ಎಲ್.ಟಿ ತಂತಿಗಳ ವಿವರಗಳು:**

**ಆರ್ಥಿಕ ವರ್ಷ : 2024-25**

| ಕಂಪನಿ ಹೆಸರು | ಬದಲಾಯಿಸಿದ ಹೆಚ್.ಟಿ ತಂತಿ Rkm ಗಳಲ್ಲಿ | ಬದಲಾಯಿಸಿದ ಎಲ್.ಟಿ ತಂತಿ Rkm ಗಳಲ್ಲಿ |
|---|---|---|
| ಬೆಸ್ಕಾಂ | 1558.17 | 1389.25 |
| ಮೆಸ್ಕಾಂ | 497.30 | 2502.50 |
| ಸೆಸ್ಕ್ | 172.45 | 261.13 |
| ಹೆಸ್ಕಾಂ | 266.26 | 1100.09 |
| ಜೆಸ್ಕಾಂ | 490.73 | 167.54 |

**ಆರ್ಥಿಕ ವರ್ಷ : 2025-26 (ಜುಲೈ 25ರ ಅಂತ್ಯಕ್ಕೆ) :**

| ಕಂಪನಿ ಹೆಸರು | ಬದಲಾಯಿಸಿದ ಹೆಚ್.ಟಿ ತಂತಿ Rkm ಗಳಲ್ಲಿ | ಬದಲಾಯಿಸಿದ ಎಲ್.ಟಿ ತಂತಿ Rkm ಗಳಲ್ಲಿ |
|---|---|---|
| ಬೆಸ್ಕಾಂ | 645.35 | 722.68 |
| ಮೆಸ್ಕಾಂ | 100.74 | 337.44 |
| ಸೆಸ್ಕ್ | 57.55 | 96.75 |
| ಹೆಸ್ಕಾಂ | 80.00 | - |
| ಜೆಸ್ಕಾಂ | 126.14 | 54.34 |